ಭಟ್ಟರ್ ಸ್ಕಾಚ್

- **ಚಂದ್ರಮೋಹನ್ ಬಾಗಿಲ್, ಬೆಂಗಳೂರು**

ಭಟ್ರೇ, ಎಲ್ಲಾ ಗಂಡಂದಿರೂ ಅವರವರ ಹೆಂಡತಿಯರಿಗೆ ಹೆದರುತ್ತಾರಲ್ಲ?

– ವಾಕ್ಯ ಮತ್ತು ವಿಚಾರ ಸರಿಯಿದೆಯಲ್ಲ, ಹೀಗಿರುವಾಗ ಪ್ರಶ್ನೆಯೇನು ಬಂತು?!

- **ನಿರಂಜನ ಶಾಸ್ತ್ರೀ, ಸಂಡೂರು**

ಭಟ್ರೇ, ನೆಮ್ಮದಿಯಾಗಿರಲು ಏನು ಮಾಡಬೇಕು?

– ನಿದ್ದೆ ಮಾಡಬೇಕು !

- **ಕೆ.ಕೆ.ನಾಗರಾಜ, ಹೊಸಪೇಟೆ**

ಭಟ್ರೇ, ವಯಸ್ಸಾಗುತ್ತಿದ್ದಂತೆ ಪ್ರಬುದ್ಧತೆ ಬರುವುದಾ?

– ಇಂಥ ತಿರಸಟ್ಟು ಪ್ರಶ್ನೆಗಳನ್ನೆಲ್ಲಾ ಕೇಳಬೇಡಿ, ಅನ್ನಬೇಕೇ ಯತ್ನಾಳ್?!

- **ಶ್ರೀಶೈಲ್ ಪಾಟೀಲ್, ಬೀಳಗಿ**

ಭಟ್ರೇ, ಜೆಡಿಎಸ್ ಪಕ್ಷಕ್ಕೆ ತೆನೆ ಹೊತ್ತ ಮಹಿಳೆ ಬದಲು ಯಾವ ಚಿಹ್ನೆ ಇರಬೇಕಿತ್ತು ?

– ಬೇರೆ ಚಿಹ್ನೆ ಇದ್ದರೆ ಸೀಟುಗಳು ಜಾಸ್ತಿಯಾಗುತ್ತಿದ್ದವಾ ?!

- **ವೇಣುಗೋಪಾಲ ಕಂಚಿತೋಟ, (ಇಮೇಲ್ ಮೂಲಕ)**

ಭಟ್ರೇ, ನಮ್ಮ ಬಗ್ಗೆ ಸದಾ ಯೋಚಿಸುವವರು, ಕೈಹಿಡಿದು ನಡೆಸುವವರು ಯಾರು?

– ಗೂಗಲ್ !

- **ಚಿರಂತನ ಬಿ., ಮೈಸೂರು**

ಭಟ್ರೇ, ಮದುವೆಯಾದ ಬಳಿಕ ಹೆಂಗಸರು ಒಂದೇ ರೀತಿ ಕಾಣುತ್ತಾರಲ್ಲ?

– ಅವರು ಉಳಿದವರನ್ನು ಅನುಸರಿಸುವುದರಿಂದ, ಒಂದೇ ಥರ ಕಾಣುತ್ತಾರೆ!

- **ಸತೀಶ ಎಲ್.ವಿ., (ಇಮೇಲ್ ಮೂಲಕ)**

ಭಟ್ರೇ, ಸೂರ್ಯ ಪಶ್ಚಿಮದಲ್ಲಿ ಮೂಡಿದರೆ ಏನಾಗುತ್ತದೆ?

– ಆ ದಿನ ಧಾರಾವಾಹಿಗಳನ್ನು ಬ್ಯಾನ್ ಮಾಡಬೇಕು ಅಂತ ಹೆಂಗಸರು ಪ್ರತಿಭಟನೆ ಮಾಡ್ತಾರೆ!

- **ನಾರಾಯಣ ಮುಂಡಿಗೆ, ಸಿದ್ದಾಪುರ**

ಭಟ್ರೇ, ಅನ್ನವಿಲ್ಲದೇ ಜನ ಹೇಗೆ ಜೀವಿಸುತ್ತಾರೆ?

– ಅದೇನು ಮಹಾ?! ಇಂಟರ್ನೆಟ್ ಇಲ್ಲದೇ ಹೇಗೆ ಜೀವಿಸ್ತಾರೆ ಅಂತ ಮೊದಲು ಹೇಳು!

- **ರಾಜು ಪತ್ತಾರ, ಹುಬ್ಬಳ್ಳಿ**

ಭಟ್ರೇ, ನಿಮ್ಮ ಕೈಹಿಡಿಯುವವರು ಯಾರು?

– ನಿತ್ಯವೂ ಪ್ರಶ್ನೆ ಕಳಿಸುವ ನಿನ್ನಂಥವರು !

- **ಪ್ರದೀಪ ನಾಯಕ, ಬೆಂಗಳೂರು**

ಭಟ್ರೇ, ಬೊಮ್ಮಾಯಿ ಕಾಲು ನೋವು ಸರಕಾರದ ಭವಿಷ್ಯವನ್ನು ನಿರ್ಧರಿಸುತ್ತಾ?

– ಕಾಲುನೋವಾ ? ಅದು ಶ್ರೀವಲ್ಲಿ ಹಾಡಿಗೆ ಬೊಮ್ಮಾಯಿ ಹಾಕಿದ ಸ್ಟೆಪ್ಸ್ ಅಂತಾರಲ್ಲ!

ಭಯೋತ್ಪಾದಕರು; ಯಾರಿಗೆ ಹೇಳಿದಿರಿ!?

ಸೋತು ನಿರ್ನಾಮವಾಗುತ್ತಿರುವ ಪಕ್ಷದ ಮುಖಂಡರು ಹೇಗೆ ನಡೆದುಕೊಳ್ಳಬೇಕು ಹೇಳಿ? ಅಯ್ಯೋ ನಮ್ಮ ಪಕ್ಷಕ್ಕೆ ಇಂಥ ಗತಿ ಬಂತಲ್ಲ, ನಮ್ಮದೇನು ತಪ್ಪಾಗಿದೆ, ಯಾಕೆ ನಮಗೆ ಹೀಗೆಲ್ಲಾ ಸೋಲಾಗುತ್ತಿದೆ ಎಂದು ಪಶ್ಚಾತ್ತಾಪ ಪಟ್ಟು ಆತ್ಮಾವಲೋಕನ ಮಾಡಿಕೊಳ್ಳುವುದು ಲೋಕರೂಢಿ.

ಹಂಪಿ ಎಕ್ಸ್‌ಪ್ರೆಸ್

ದೇವಿ ಮಹೇಶ್ವರ ಹಂಪಿನಾಯ್ಡು

1336hampiexpress1509@gmail.com

ಎಲ್ಲದಕ್ಕೂ ಒಂದು ಮಿತಿ ಇರುತ್ತದೆ. ಅದು ಅತಿಯಾದರೆ ಅಧೋಗತಿಯಾಗುತ್ತದೆ, ಇಲ್ಲದಿದ್ದರೆ ಕಾಂಗ್ರೆಸ್ ಪಕ್ಷ ಆಗುತ್ತದೆ. ರಾಜನೊಬ್ಬ ಜನರಿಂದ ತಿರಸ್ಕರಿಸಲ್ಪಟ್ಟರೆ ಆತ ಪ್ರಜೆಗಳಿಗೆ ಶರಣಾಗಿ ಅರಮನೆ ಬಿಟ್ಟು ತನ್ನ ಸೋಲನ್ನು ಆತ್ಮಾವಲೋಕನ ಮಾಡಿಕೊಳ್ಳಲು ಪ್ರಜೆಗಳೊಂದಿಗೆ ಜೀವಿಸಲಾರಂಭಿಸಿ ಮತ್ತೆ ಜನರ ಪ್ರೀತಿ ವಿಶ್ವಾಸವನ್ನು ಗಳಿಸಿಕೊಂಡು ಅರಮನೆ ಪ್ರವೇಶಿಸಲು ಯತ್ನಿಸುತ್ತಾನೆ. ಇಲ್ಲವಾದರೆ ರಾಜ್ಯ ತೊರೆದು ಗಡಿಪಾರಾಗುತ್ತಾನೆ. ಆದರೆ ಅದೇ ರಾಜನೊಬ್ಬ ಪ್ರಜೆಗಳ ವಿಶ್ವಾಸ ಗಳಿಸಿಕೊಂಡು ರಾಜನಾಗುವುದನ್ನು ಬಿಟ್ಟು ಅದೇ ರಾಜ್ಯದೊಳಗೆ ಮತಿಹೀನನಾಗಿ ತನ್ನ ಪ್ರಜೆಗಳ ಕೆಂಗಣ್ಣಿಗೆ ಗುರಿಯಾಗಿ ಅಸಹನೆ ಸೃಷ್ಟಿಸಿ ಅವಿವೇಕಿಯಂತೆ ಮೆರೆದು ತನ್ನದೇ ರಾಜ್ಯದಲ್ಲಿ ಖಳನಾಯಕನಾದರೆ ಪ್ರಜೆಗಳೇ ಕಲ್ಲು ಹೊಡೆದು ಊರಾಚೆ ಅಟ್ಟುತ್ತಾರೆ. ಮುಂದೆ ಸಮರ್ಥನೊಬ್ಬ ರಾಜನಾಗಿ ಸಾಮ್ರಾಜ್ಯ ಕಟ್ಟಿ ಅದೇ ಪ್ರಜೆಗಳ ವಿಶ್ವಾಸಗಳಿಸಿ ರಾಜನಾಗುತ್ತಾನೆ.

ಈ ಸನ್ನಿವೇಶ ಪ್ರಸ್ತುತ ಕಾಂಗ್ರೆಸ್ ಪಕ್ಷಕ್ಕೆ ಅನ್ವಯಿಸುತ್ತದೆ. ಒಂದು ಕಾಲದಲ್ಲಿ ದೇಶವೆಂದರೆ ಕಾಂಗ್ರೆಸ್, ಕಾಂಗ್ರೆಸ್ ಎಂದರೆ ದೇಶ ಎಂಬಂತಿತ್ತು. ಆಗೆಲ್ಲಾ ಎಲ್ಲದಕ್ಕೂ ಒಂದು ಮಿತಿ ಇರುತ್ತದೆ ಎಂಬ ನೀತಿಯ ಅವಧಿಯಲ್ಲಿ ಮೆರೆಯುತಿತ್ತು. ಅದು ಈಗ ಮಿತಿ ಅತಿಯಾದಾಗ ಅಧೋಗತಿಯಾಗುತ್ತದೆ ಎಂಬ ಫಲಿತಾಂಶದ ದೃಷ್ಟಾಂತಕ್ಕೆ ಬಂದು ತಲುಪಿದೆ. ಸೋಲು ಗೆಲುವು ಸಹಜ ಆದರೆ ದೇಶಾದ್ಯಂತ ಸೋತು ಸುಟ್ಟುಹೋಗುತ್ತಿರುವ ಕಾಂಗ್ರೆಸ್ ಪಕ್ಷದ ದರಿದ್ರವೇನೆಂದರೆ ಸೋಲುತಿದ್ದರೂ ಮುಂದೊಂದು ದಿನ ಗೆಲ್ಲುವ ನಂಬಿಕೆ ವಿಶ್ವಾಸದ ಅವಕಾಶವನ್ನೇ ಕಳೆದುಕೊಳ್ಳುತ್ತಿದೆ. ಇದಕ್ಕೆ ಕಾರಣ ಪ್ರತಿಸ್ಪರ್ಧಿ ಪಕ್ಷಗಳಲ್ಲ, ವಿರೋಧ ಪಕ್ಷಗಳೂ ಅಲ್ಲ. ಸಾಕ್ಷಾತ್ ಅದರ ಒಳಗೇ ಇರುವ ರೋಗಾಣುವಿನಂಥ ನಾಯಕರು ಪಿತಪಿತ ಕೊಳೆಯುವಂತೆ ಹುಟ್ಟಿಕೊಂಡು ಗ್ಯಾಂಗ್ರಿನ್ ತಗುಲಿಸಿದ್ದಾರೆ. ಇದಕ್ಕೆ ತಾಜಾ ಉದಾಹರಣೆಯೆಂದರೆ ಪಂಜಾಬ್‌ನಲ್ಲಿ ಸಿಧು ಎಂಬ ಯಡವಟ್ಟು ಮನುಷ್ಯ ಯಾವ ಮಟ್ಟದಲ್ಲಿ ಕಾಂಗ್ರೆಸ್‌ನ್ನು ನೆಲಸಮ ಮಾಡಿದನೆಂದರೆ ದಶಕಗಳ ಕಾಲ ಅಧಿಕಾರದಲ್ಲಿದ್ದ ಆ ಪಕ್ಷ ಸ್ವತಂತ್ರ ಅಭ್ಯರ್ಥಿಗಳಿಗಿಂತಲೂ ಹೀನಾಯ ಸೋಲುಂಡಿತು. ಈಗ ಕರ್ನಾಟಕದ ಮಂದಿ ಮಾತಾಡಿಕೊಳ್ಳುತ್ತಿರುವುದೇನೆಂದರೆ ಅಂಥ ಸಿಧುಗಳು ನಮ್ಮ ರಾಜ್ಯದಲ್ಲೂ ಅನೇಕರಿದ್ದಾರೆಂದು ಲೆಕ್ಕ ಹಾಕತೊಡಗಿದ್ದಾರೆ.

ಅಲ್ಲಾ, ಸೋತು ನಿರ್ನಾಮವಾಗುತ್ತಿರುವ ಪಕ್ಷದ ಮುಖಂಡರು ಹೇಗೆ ನಡೆದುಕೊಳ್ಳಬೇಕು ಹೇಳಿ? ಅಯ್ಯೋ ನಮ್ಮ ಪಕ್ಷಕ್ಕೆ ಇಂಥ ಗತಿ ಬಂತಲ್ಲ, ಜನ ಯಾಕೆ ನಮ್ಮನ್ನು ಇಂಥ ಗತಿಗೆ ದೂಡುತ್ತಿದ್ದಾರೆ, ನಮ್ಮದೇನು ತಪ್ಪಾಗಿದೆ, ಯಾಕೆ ನಮಗೆ ಹೀಗೆಲ್ಲಾ ಸೋಲಾಗುತ್ತಿದೆ ಎಂದು ಪಶ್ಚಾತ್ತಾಪ ಪಟ್ಟು ಆತ್ಮಾವಲೋಕನ ಮಾಡಿಕೊಳ್ಳುವುದು ಲೋಕರೂಢಿ. ಆದರೆ ಕಾಂಗ್ರೆಸ್ ಪಕ್ಷದ ನಾಯಕರು ನಡೆದುಕೊಳ್ಳುತ್ತಿರುವ ರೀತಿಯನ್ನು ನೋಡುತ್ತಿದ್ದರೆ ಅಯೋಧ್ಯೆಯ ಶ್ರೀರಾಮನ ದೇವಾಲಯವನ್ನು ಕೆಡವಿ ನೆಲಸಮ ಮಾಡಿ ಅದರ ಮೇಲೆ ಮತ್ತೆ ಬಾಬರಿ ಮಸೀದಿ ಕಟ್ಟುತ್ತಿರುವಂತೆ ಭಾಸವಾಗುತ್ತಿದೆ. ಒಬ್ಬೊಬ್ಬರ ಕೈಯಲ್ಲೂ ಗಡಪಾರಿ ಗುದ್ದಲಿ ಪಿಕಾಸಿಯಂಥ ಆಯುಧಗಳು ಬಾಯಲ್ಲಿ ಬರುತ್ತಿರುವ ಹೇಳಿಕೆಗಳಾಗಿ ಝುಳಪಿಸುತ್ತಿದೆ.

ಇವರ ಮಾತುಗಳನ್ನು ಯಾರು ಯಾರಿಗೆ ಹೇಳಿದರು ಎಂದು ಪ್ರಶ್ನೆಗಳನ್ನು ಹಾಕುತ್ತಾ ಹೋದರೆ ಇವರುಗಳನ್ನು ಹೊಂದಿಸಿ ಬರೆಯಲೇ ಆಗದಂಥ ಸ್ಥಿತಿ ತಲುಪುತ್ತಿದ್ದಾರೆ. ಸಮಾನತೆಯೇ ಸುಪ್ರಭಾತ ಎನ್ನುತ್ತಾ, ಸಮಾನತೆಯ ಭಜನೆ ಮಾಡುತ್ತೇವೆ ಎನ್ನುತ್ತಲೇ ಬಂದ ಕಾಂಗ್ರೆಸ್ ಪಕ್ಷ ಮಾಡಿಕೊಂಡು ಬಂದಿದ್ದು ಪರಿಶುದ್ಧ ಆಜಾನ್ ಮಾತ್ರ. ಅವರ ಸಮಾನತೆಯ ದ್ಯೋತಕಗಳನ್ನೇ ನೋಡಿ, ದಲಿತರೇ ಪಕ್ಷದ ಆಸ್ತಿ ಎನ್ನುತ್ತಾರೆ. ಆದರೆ ದಲಿತ ಶಾಸಕನ ಮನೆಗೆ ಬೆಂಕಿ ಇಟ್ಟವರ ಅಟ್ಟಹಾಸವನ್ನು ಮಟ್ಟಹಾಕಿ ಎನ್ನುವುದಿಲ್ಲ. ಸಂವಿಧಾನ, ಕಾನೂನು, ಸಮಾಜ ಎನ್ನುತ್ತಾರೆ ಆದರೆ ಅದನ್ನು ಕಾಯುವ ಪೊಲೀಸರ ಮೇಲೆ, ಪೊಲೀಸ್ ಠಾಣೆಯ ಮೇಲೆ ದಾಳಿ ಮಾಡಿದವರನ್ನು ಖಂಡಿಸಿ ಪ್ರತಿಭಟಿಸುವುದಿಲ್ಲ. ಸಂವಿಧಾನ ಕಾನೂನು ಬಾಹಿರವಾಗಿ ಹಿಜಾಬ್ ಬೇಕೆನ್ನುವವರಿಗೆ ಪಾಠ ಹೇಳುವುದಿಲ್ಲ. ಆದರೆ ಹಿಜಾಬ್ ಪ್ರತಿಯಾಗಿ ಕೇಸರಿ ಶಾಲು ಬಂದಾಗ ಅದಕ್ಕೆ ಕೆಸರು ಮೆತ್ತಿಸಲು ಯತ್ನಿಸುತ್ತಾರೆ. ದೇಶದ ಕಾನೂನಿನ ವಿರುದ್ಧ ದಂಗೆ ಎದ್ದು ಪ್ರತಿಭಟಿಸಿ ಗೋಲಿಬಾರ್‌ನಿಂದ ಮೃತರಾದವರ ಮನೆಗೆ ತೆರಳಿ ಕಣ್ಣೀರು ಸುರಿಸಿ ಹಣಹರಿಸುತ್ತಾರೆ. ಆದರೆ ದೇಶಭಕ್ತ ಯುವಕರು ಧರ್ಮಾಂಧರಿಂದ ಹತ್ಯೆಯಾದಾಗ ಬೀದಿನಾಯಿ ಸತ್ತಿರುವಂತೆ ಸುಮ್ಮನಿರುತ್ತಾರೆ. ಮಾತೆತ್ತಿದರೆ ಸಂವಿಧಾನ ನ್ಯಾಯಾಲಯ ಎನ್ನುತ್ತಾರೆ. ಆದರೆ ಅದರ ವಿರುದ್ಧವಾಗಿ ಕರ್ನಾಟಕ ಬಂದ್‌ಗೆ ಕರೆ ನೀಡಿದರೆ ಅದು ಅವರ ಹಕ್ಕು ಎಂದು ಹೊಸ ನೀತಿ ಹೇಳುತ್ತಾರೆ. ಅಯೋಧ್ಯೆ ರಾಮ ಮಂದಿರಕ್ಕೆ ದೇಣಿಗೆ ಕೇಳಿದರೆ ಮಂದಿರ ನಿರ್ಮಾಣವೇ ಅಕ್ರಮ ಎಂದು ಪರಮೋಚ್ಚ ನ್ಯಾಯಾಲಯದ ಆದೇಶವನ್ನೇ ಧಿಕ್ಕರಿಸುತ್ತಾರೆ.

ಸಮಾಜದಲ್ಲಿ ಮಚ್ಚು ಲಾಂಗು ಹಿಡಿದು, ಕಲ್ಲುಗಳನ್ನು ಸಂಗ್ರಹಿಸಿಕೊಂಡು ಹಿಂದೂ ದೇವರುಗಳ ಉತ್ಸವ ಮೆರವಣಿಗೆಗಳ ಮೇಲೆ ಎರಗುವುದು, ಪೊಲೀಸ್ ವಾಹನದ ಮೇಲೇರಿ ಮೆರೆಯುವುದು, ಪೊಲೀಸರನ್ನೇ ಅಟ್ಟಾಡಿಸಿಕೊಂಡು ಕೊಲ್ಲಲು ಯತ್ನಿಸುವುದು ಇಂಥ ರಿಯಲ್ ಸಾಹಸಗಳನ್ನು ಮಾಡಿದವರೆಲ್ಲಾ ಇವರಿಗೆ ಭಯೋತ್ಪಾದಕರಂತೆ ಕಾಣುವುದೇ ಇಲ್ಲ. ಜತೆಗೆ ಇಂಥ ಸಮಾಜಗೇಡಿಗಳಿಗೆ ತಮ್ಮದೇ ಪಕ್ಷದ ಮುಖಂಡರು ಅನುಕಂಪ ಹಣ ಸಹಾಯ ಮಾಡಿದರೆ ಅದು ಮಹಾನ್ ಮಾನವೀಯತೆ. ಹೀಗೆ ಸಮಾಜದ್ರೋಹಿಗಳನ್ನು ಖಂಡಿಸದೆ, ತಿದ್ದಲು ಪ್ರಯತ್ನಿಸದೆ ಎಲ್ಲರೂ ತಮ್ಮ ಬ್ರದರ್ಸ್‌ಗಳೆಂದು, ಅವರೊಂದಿಗೆ ಬದುಕುತ್ತೇವೆ ಅವರೊಂದಿಗೆ ಸಾಯುತ್ತೇವೆಂದು ಹೇಳುತ್ತಾ, ಹನುಮಾನ್ ಚಾಲೀಸ್ ಭಜನೆ ಮಾಡಿದವರನ್ನು ಭಯೋತ್ಪಾದಕರು ಕೋಮುವಾದಿಗಳೆಂದು ಹೇಳುವುದಿದೆಯಲ್ಲಾ ಅಂಥ ಅನಾಗರಿಕತನ ಮತ್ತು ವ್ಯಕ್ತಿತ್ವ ವಿವೇಕದ ದಿವಾಳಿತನವೇ ಇಂಥ ರಾಜಕೀಯ ಪಕ್ಷಗಳನ್ನು ಅಧೋಗತಿಗೆ ತಂದು ನಿಲ್ಲಿಸಿವೆ.

ಈ ಬಿ.ಕೆ.ಹರಿಪ್ರಸಾದ್ ಅವರಿಗೇನಾಗಿದೆ? ದೆಹಲಿ ಮಟ್ಟದ ಹಿರಿಯ ನಾಯಕ ಎನಿಸಿಕೊಂಡಿದ್ದಾರೆ. ತಮ್ಮ ಪಕ್ಷದ ಹೈಕಮಾಂಡ್‌ಗೂ ಪಕ್ಷದ ರಾಜ್ಯ ಘಟಕಕ್ಕೂ ಕೊಂಡಿಯಾಗಿ ದೆಹಲಿ ಮಟ್ಟದ ನಾಯಕರೆನಿಸಿರುವ ಇವರಿಗೆ ಸ್ಥಳೀಯ ಜನರ ವಿಶ್ವಾಸವನ್ನು ಗಳಿಸಿಕೊಂಡು ನೆಟ್ಟಗೆ ಒಂದು ಚುನಾವಣೆಯನ್ನು ಎದುರಿಸಿ ಗೆದ್ದು ಜನಪ್ರತಿನಿಧಿಯಾಗುವ ಅರ್ಹತೆಯನ್ನು ಸಿದ್ಧಿಸಿಕೊಳ್ಳಲಾಗಲಿಲ್ಲ. ಹೈಕಮಾಂಡ್ ವಿಶ್ವಾಸಿ ಎಂಬ ನಂಬಿಕೆಯ ಮೇಲೆ ಚುನಾವಣೆಯಲ್ಲಿ ಅನೇಕರು ತಮಗೆ ಟಿಕೆಟ್ ಕೊಡಿಸುತ್ತಾರೆಂದು ಕಾಯುತ್ತಿದ್ದಾಗ ಸ್ವತಃ ತಾವೇ ಟಿಕೆಟ್ ಪಡೆದು ಚುನಾವಣೆಗೆ ನಿಂತರು. ಆಗ ಪತ್ರಿಕೆ 'ಮಗನಿಗೆ ಹೆಣ್ಣು ನೋಡಲು ಹೊರಟ ಅಪ್ಪ ತಾನೇ ಮದುವೆ ಮಾಡಿಕೊಂಡ' ಎಂದು ಬರೆದು ವಿಡಂಬನೆ ಮಾಡಿತು. ಆಗಲೂ ತಮ್ಮ ಮುತ್ಸದ್ದಿತನವನ್ನು ಗಂಭೀರವಾಗಿ ಕಾಪಾಡಿಕೊಳ್ಳಲಿಲ್ಲ. ಬೆಂಗಳೂರು ದಕ್ಷಿಣ ಲೋಕಸಭೆಯ ಚುನಾವಣೆಯಲ್ಲಿ ಇಪ್ಪತ್ತೆಂಟು ವರ್ಷದ ದೇಶಭಕ್ತ ರಾಜಕೀಯ ಅನನುಭವಿ ಹುಡುಗನ ಮುಂದೆ ಸೋತರು. ಆರ್‌ಎಸ್‌ಎಸ್ ಎಂದರೇನೆಂದು ಪುಟ್ಟ ವಿದ್ಯಾರ್ಥಿಗೂ ತಿಳಿದಿದೆ. ಆದರೆ ಅಂಥ ದೇಶಭಕ್ತ ಸಂಘಟನೆಯನ್ನು ಜ್ಞಾನರಹಿತವಾಗಿ ತಾಲಿಬಾನ್ ಭಯೋತ್ಪಾದಕರಿಗೆ ಹೋಲಿಸಿ ಮಾತನಾಡಿದರು.

ಬಿ.ಕೆ. ಹರಿಪ್ರಸಾದ್ ಅವರೇ, ಸಾಮಾಜದ ಹಿತದೃಷ್ಟಿಯಿಂದ ಆಜಾನ್ ವಿರುದ್ಧ ದೇಶದ ಉಚ್ಚ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯವೇ ಆದೇಶ ಹೊರಡಿಸಿ ಅದನ್ನು ನಿಯಂತ್ರಿಸಲು ಸರಕಾರಗಳಿಗೆ ಸೂಚನೆ ನೀಡಿದೆ. ನ್ಯಾಯಾಲಯದ ಆದೇಶವನ್ನು ಸರಕಾರ ಪಾಲಿಸದಿದ್ದಾಗ ಅದರ ವಿರುದ್ಧವಾಗಿ ಹಿಂದೂಗಳು ಮಂದಿರದಲ್ಲಿ ಭಜನೆ ಮಾಡಿದರೆ ಅವರೆಲ್ಲಾ ನಿಮಗೆ ಭಯೋತ್ಪಾದಕರಾಗಿ ಕಾಣಿಸುತ್ತಾರೆಯೇ. ವಿರೋಧಪಕ್ಷದ ಒಬ್ಬ ವಿವೇಕವಂತ ನ್ಯಾಯಪರ ರಾಜಕಾರಣಿಯಾಗಿ ಮೊದಲಿಗೆ ನ್ಯಾಯಾಲಯದ ಆದೇಶವನ್ನು ಪಾಲಿಸಿ ಎಂದು ಮುಖ್ಯಮಂತ್ರಿ ಬೊಮ್ಮಾಯಿಯವರ ಮೇಲೆ ಒತ್ತಡ ಹೇರುವುದನ್ನು ಬಿಟ್ಟು ಆಜಾನ್ ವಿರುದ್ಧ ಭಜನೆ ಮಾಡುವ ಹಿಂದೂಗಳನ್ನು ಮತ್ತದೇ ಭಯೋತ್ಪಾದಕರಿಗೆ ಹೋಲಿಸಿ ಹೊಲಸಿನಂಥ ಹೇಳಿಕೆ ನೀಡುವುದು ತರವಲ್ಲ. ಹೀಗೆ ಅಸಂಬದ್ಧವಾಗಿ ಬಾಲಿಶವಾಗಿ ಮಾತನಾಡುತ್ತಲೇ ತಮ್ಮ ಪಕ್ಷಕ್ಕಿರುವ ಅಷ್ಟಿಷ್ಟು ಗೌರವವನ್ನು ಕಳೆದುಕೊಳ್ಳುತ್ತಿರುವುದು ಸುಳ್ಳಲ್ಲ, ಒಂದು ರಾಷ್ಟ್ರೀಯ ಪಕ್ಷದ ಸ್ಪೋಕ್ಸ್‌ಮನ್ ಆಗಿ ಇನ್ನೂ ಇಂಥ ಅತಿಶಯವಾದ ದರಿದ್ರ ಹೇಳಿಕೆಗಳನ್ನು ನೀಡುತ್ತಿದ್ದರೆ ಇನ್ನೆಷ್ಟು ದಿನ ಇನ್ನೆಷ್ಟು ಜನ ಕಾಂಗ್ರೆಸ್ ಪಕ್ಷವನ್ನು ಸಹಿಸಿಕೊಂಡಿರುತ್ತಾರೆಂದು ಹರಿಪ್ರಸಾದ್ ಯೋಚಿಸಿದ್ದಾರೆಯೇ? ಬೇರೆಲ್ಲೂ ಬೇಡ ಸ್ವತಃ ಹರಿಪ್ರಸಾದ್ ಅವರ ಸೋದರರನ್ನೇ ನೋಡಿ ಬಿ.ಕೆ. ಶಿವರಾಮ್ ಎಂಬ ದಕ್ಷ ನಿವೃತ್ತ ಪೊಲೀಸ್ ಅಧಿಕಾರಿ ಸಮಾಜದಲ್ಲಿ ಬೆಂಕಿ ಶಿವರಾಮ್ ಎಂದು ಕರೆಸಿಕೊಂಡು ಸಂಭಾವಿತ ವ್ಯಕ್ತಿಯಾಗಿ ಗುರುತಿಸಿಕೊಂಡಿದ್ದಾರೆ. ಆದರೆ ಬಿ.ಕೆ.ಹರಿಪ್ರಸಾದ್ ಅವರು ಹಿರಿಯ ಮುತ್ಸದ್ದಿಯಾಗಿ ಇಂಥ ಅನ್ಯಾಯದ ಅವಿವೇಕದ ಹೇಳಿಕೆಗಳನ್ನು ನೀಡಿ ತಮ್ಮ ಪಕ್ಷವನ್ನು ಪಾತಾಳಕ್ಕಿಳಿಸುತ್ತಿರುವುದು ದುರದೃಷ್ಟಕರ.

ಮೊನ್ನೆಯಷ್ಟೇ ಬೆಂಗಳೂರಿನ ನೆಮ್ಮದಿ ಹಾಳು ಮಾಡಲು ಸಜ್ಜಾಗಿ ಪೆಟ್ರೋಲ್ ಬಾಂಬ್‌ಗಳನ್ನು ತಯಾರಿಸಿಟ್ಟಿದ್ದ ಭಯೋತ್ಪಾದಕರನ್ನು ಪೊಲೀಸರು ಬಂಧಿಸಿದರಲ್ಲಾ, ಅವರುಗಳು ನಿಮಗೆ ಭಯೋತ್ಪಾದಕರಂತೆ ಕಾಣಲಿಲ್ಲವೇ? ಮೊನ್ನೆ ಖ್ಯಾತ ಸುದ್ದಿ ವಾಹಿನಿಯ ಪತ್ರಕರ್ತರು ಇಂಥ ಪ್ರಶ್ನೆಗಳನ್ನೇ ಕೇಳಿದಾಗ ನೀವು ವರ್ತಿಸಿದ ರೀತಿ ನಿಜಕ್ಕೂ ಹೇಸಿಗೆ ಹುಟ್ಟಿಸಿದೆ. ಅವರ ಪ್ರಶ್ನೆಗಳನ್ನು ಸಕಾರಾತ್ಮಕವಾಗಿ ಸ್ವೀಕರಿಸಿ ಉತ್ತರಿಸದೆ, ಅವರನ್ನು ಬಿಜೆಪಿ ವಕ್ತಾರ ಎಂದೆಲ್ಲಾ ಜರಿದು ಅವರಿಗೇ ಅಮರಿಕೊಂಡಿರಲ್ಲಾ ಅದು ನಿಮ್ಮ ಹಿರಿತನಕ್ಕೆ ತಕ್ಕುದಾದ್ದಲ್ಲ. ಬಿ.ಕೆ. ಹರಿಪ್ರಸಾದ್ ಅವರೇ, ಜನ ಎಷ್ಟು ಜಾಗೃತರಾಗಿದ್ದಾರೆಂದರೆ ಸಚಿನ್ ತೆಂಡೂಲ್ಕರ್ ಐವತ್ತು ರನ್ ದಾಟುತ್ತಲೇ ಜನ ಈತ ದೇಶಕ್ಕಾಗಿ ಆಡುತ್ತಿದ್ದಾನೆಯೇ ಅಥವಾ ಸೆಂಚುರಿಗಾಗಿ ಆಡುತ್ತಿದ್ದಾನೆಯೇ ಎಂದು ಅನುಮಾನಿಸಿ ನೋಡುತ್ತಾರೆ. ಅಷ್ಟೇ ಅಲ್ಲಾ, ರಾಜ್ಯದ ಬಿಜೆಪಿ ಪಕ್ಷ ಪ್ರತಿಪಾದಿಸುತ್ತಿರುವ ರಾಷ್ಟ್ರೀಯತೆ ಹಿಂದುತ್ವ ಎಷ್ಟರ ಮಟ್ಟಿಗೆ ಪವಿತ್ರವಾಗಿದೆ ಎಂದೂ ತುಲನೆ ಮಾಡುತ್ತಾರೆ. ಕೇವಲ ಅವರ ಹಿಂದುತ್ವವನ್ನೇ ನಂಬಿದ್ದರೆ 2013ರಲ್ಲಿ ಅವರನ್ನು ಹೀನಾಯವಾಗಿ ಸೋಲಿಸುತ್ತಿರಲಿಲ್ಲ.

ಬಿಜೆಪಿಯವರ ನೈಜ ರಾಷ್ಟ್ರೀಯತೆ ದೇಶಾಭಿಮಾನ ಹಿಂದುತ್ವವು ಎಷ್ಟು ನಕಲಿಯಾಗುತ್ತದೆಯೋ ಅಷ್ಟೇ ನಿಮ್ಮಂಥವರ ಹಿಂದುತ್ವ ವಿರೋಧಿ ಹೇಳಿಕೆಗಳು, ಹಿಂದೂಗಳ ಭಾವನೆಗಳನ್ನು ಕಡೆಗಣಿಸುವ, ಅವರ ನಂಬಿಕೆಗಳನ್ನು ಅವಮಾನಿಸುವ ಮತ್ತು ಹಿಂದೂಗಳ ಮತಗಳೇ ನಮಗೆ ಗಣ್ಯವಲ್ಲ ಎಂಬಂಥ ನಿಮ್ಮ ಉಡಾಫೆತನ, ಧಾರ್ಷ್ಟ್ಯತೆಯ ನಡೆಗಳೂ ಅಪಾಯಕಾರಿ. ಸೋತಿರುವ ರಾಜನ ಸ್ಥಾನದಲ್ಲಿ ನೀವು, ನಿಮ್ಮ ಪಕ್ಷ ಬಂದು ತಲುಪಿದೆ. ಅದಕ್ಕೆ ಕಾರಣಗಳು ಸ್ವಯಂಕೃತ ಅಪರಾಧಗಳನ್ನು ಅವಲೋಕನ ಮಾಡಿಕೊಂಡು ಆಗಿರುವ ಯಡವಟ್ಟುಗಳನ್ನು ಸರಿಪಡಿಸಿಕೊಂಡು ಎಲ್ಲಾ ಧರ್ಮದವರ ಮತದಾರರ ವಿಶ್ವಾಸವನ್ನು ಗಳಿಸಿಕೊಂಡು ಸಂವಿಧಾನದ ಆಶಯದಂತೆ ಸಮಾನತೆಯ ಸಿದ್ಧಾಂತವನ್ನು ಸ್ಥಾಪಿಸುವ ಹೊಣೆಗಾರಿಕೆ ನಿಮ್ಮಂಥ ನಾಯಕರಿಗಿದೆ. ಅದೆಲ್ಲಾ ಹಾಳುಬಿದ್ದು ಹೋಗಲಿ ಕನಿಷ್ಠ ಭಯೋತ್ಪಾದಕರು ಎಂಬ ಪದವನ್ನು ಯಾರಿಗೆ ಬಳಸಬೇಕು ಮತ್ತು ಹೊಂದಿಸಿ ಬರೆಯಬೇಕೆಂಬುದನ್ನು ಕಲಿತರೂ ಸಾಕು. ಸಮಾಜ ನಿಮ್ಮನ್ನು ಗೌರವಿಸುತ್ತದೆ. ಕೊನೆಯದಾಗಿ, ಬೆಕ್ಕು ಕಣ್ಣು ಮುಚ್ಚಿಕೊಂಡು ಹಾಲು ಕುಡಿಯುತ್ತಿದೆ; ಜನ ಸುತ್ತಲೂ ನಿಂತು ನೋಡುತ್ತಿದ್ದಾರೆ. ಚುನಾವಣೆ ಮುಂದಿನ ವರ್ಷವಿದೆ!

ವಿಚಾರ

ಮಂಜುನಾಥ ಬಿ.ಆರ್

ವಚನಗಾರ್ತಿ ಶರಣೆಯ ಸೂಳೆಸಂಕವ್ವ, ಸನ್ನಿಲಿಯೋನ್

ಸೂಳೆ ಸಂಕವ್ವನ ಜನನ 1160 ಅಂದರೆ ಸುಮಾರು 12 ನೇ ಶತಮಾನ. ಈಕೆಯ ವಚನಗಳ ಅಂಕಿತ ನಿರ್ಲಜ್ಜೇಶ್ವರಾ. 12ನೇ ಶತಮಾನದ ಕಾಲಘಟ್ಟದಲ್ಲಿನ ಸಮಾಜದ ತಿರಸ್ಕೃತ, ಕಾಮಿಷ್ಟರ ಪುರಸ್ಕೃತಳಾದವಳು ಬಸವಣ್ಣನವರ ಅನುಭವ ಮಂಟಪದ ಶ್ರೇಷ್ಠ ಶರಣೆಯಲ್ಲಿ ಸ್ಥಾನಪಡೆದಳು. ಈಕೆಯು ವೇಶ್ಯೆವೃತ್ತಿಯನ್ನು ನಡೆಸುತ್ತಿದ್ದು ಕಾಲಾನಂತರ ಬಸವಣ್ಣನವರ ದಿವ್ಯ ಸಾನ್ನಿಧ್ಯದ ಶರಣ ದೀಕ್ಷೆಯಿಂದ ವೇಶ್ಯೆವೃತ್ತಿಯನ್ನು ಬಿಟ್ಟು ಶರಣರ ಸಂಪರ್ಕಕ್ಕೆ ಬಂದು; ವಚನಗಳ ರಚನೆಗೆ ಮತ್ತು ಉತ್ತಮ ಬದುಕಿಗೆ ಹೆಜ್ಜೆ ಇಟ್ಟಳು. ಸಂಕವ್ವನ ಏಕಮಾತ್ರ ವಚನ ಈವರೆಗೆ ಲಭ್ಯವಿರುವುದು. ಅದನ್ನು ಅಧ್ಯಾತ್ಮಿಕವಾಗಿ ವಿಶಾಲಭಾವದಲ್ಲಿ ಅರಿತರೆ ಅದರಲ್ಲಿ ಯಾವ ಬಗೆಯ ಅಸಹ್ಯವೂ ಬಹುಶಃ ಸಿಗಲಾರದು. ಇವಳ ವಚನಗಳಲ್ಲಿ ಆತ್ಮವಿಶ್ವಾಸ, ದಿಟ್ಟ ನಿಲುವು, ಅಚಲ ಎದೆಗಾರಿಕೆ, ಕಾಯಕ ನಿಷ್ಠೆಯಿದೆ. ಒತ್ತೆಯ ಹಿಡಿದು ಮುತ್ತೊತ್ತೆಯ ಹಿಡಿಯೆ, ಹಿಡಿದೆಡೆ ಬತ್ತಲೆ ನಿಲಿಸಿ ಕೊಲ್ಲುವರಯ್ಯಾ, ವ್ರತಹೀನನರಿದು ಬೆರೆದಡೆ ಕಾದ ಕತ್ತಿಯಲ್ಲಿ ಕೈಕಿವಿ ಮೂಗ ಕೊಯ್ವರಯ್ಯಾ, ಒಲ್ಲೆನೊಲ್ಲೆ ಬಲ್ಲೆನಾಗಿ ನಿಮ್ಮಾಣೆ ನಿರ್ಲಜ್ಜೇಶ್ವರಾ. ಸಂಕವ್ವನ ಈ ಬಗೆಗಿನ ಪ್ರಸ್ತಾಪ ಪುನರ್ ನೆನಪು ಮಾಡಿಕೊಳ್ಳುತ್ತಿರುವುದು ಸಮಾಜದಲ್ಲಿನ ವೇಶ್ಯೆವೃತ್ತಿಯಲ್ಲಿರುವವರ ಮೇಲಿನ ಪೂರ್ವಪೀಡಿತ ತಪ್ಪು ಕಲ್ಪನೆ ಬದಲಾಗಲಿ ಎಂದು. ಅವರನ್ನೂ ಸಮಾಜದ ಮುಖ್ಯವಾಹಿನಿಯಲ್ಲಿ ಗೌರವಿಸಿ ಒಳ್ಳೆಯ ಬದುಕನ್ನು ಸ್ಥಾಪಿಸಲಿ ಎಂದು.

ಪ್ರಸ್ತುತ ಬಾಲಿವುಡ್‌ನ ಬಹುಬೇಡಿಕೆಯ ಪೋರ್ನ್ ಸ್ಟಾರ್ ಸನ್ನಿಲಿಯೋನ್ ಸಮಾಜದ ಮುಖ್ಯ ಸ್ಥರದಲ್ಲಿ ನೈತಿಕ ವ್ಯಕ್ತಿತ್ವ ಧರಿಸಿ ಬದಲಾವಣೆಗಳೊಂದಿಗೆ ಕಾಣಿಸಿಕೊಳ್ಳುತ್ತಿದ್ದಾರೆ. ಈ ಹಿಂದೆ ಕೇರಳದಲ್ಲಿ ಪ್ರಾಕೃತಿಕ ವಿಕೋಪವಾದಾಗ ಪ್ರವಾಹ ಸಂತ್ರಸ್ತರಿಗೆ 5 ಕೋಟಿ ಧನಸಹಾಯ ನೀಡಿ ನೆರವು ನೀಡಿದರು. ಇದನ್ನು ಸಮಾಜದ ಒಂದು ವರ್ಗ ತಿರಸ್ಕಾರ ಭಾವದಿಂದ ಕಂಡಿತು. ಆದರೆ ಮಾತನಾಡಿದ ಯಾರೊಬ್ಬರೂ ಮುಂದೆ ಬಂದು ಪ್ರವಾಹ ಸಂತ್ರಸ್ಥರಿಗೆ ಸಹಾಯ ಮಾಡಲಿಲ್ಲ. ಆಕೆ ಅದಕ್ಕೆಲ್ಲಾ ಕಿವಿಗೊಡಲೇ ಇಲ್ಲ. ತಾನು ಏನೆಂದು ತೋರ್ಪಡಿಸುವ ಗೀಳಿಗೂ ಬರಲೇ ಇಲ್ಲ. ಸಮಾಜದಲ್ಲಿ ನೊಂದವರ ಪಾಲಿಗೆ ಆಕೆ ತಾಯಿಯಾಗಿ ಬದಲಾದಳು. ಸುಮಾರು 5000 ಅನಾಥ ಮಕ್ಕಳಿಗೆ ಮಾತೆಯಾಗಿ ಆಶ್ರಯ ನೀಡುತ್ತಿದ್ದಾರೆ.

ವೇಶ್ಯೆವೃತ್ತಿ ಇವತ್ತಿನದ್ದಲ್ಲ ಪ್ರಕೃತಿಯಲ್ಲಿ ನಾಗರಿಕತೆ ಎಂದು ಜನ್ಮತಾಳಿತ್ತೋ ಅವತ್ತೇ ಇದರ ಹುಟ್ಟೂ ಕೂಡ ಆಗಿದೆ. ಬುದ್ಧನ ಕಾಲದಲ್ಲಿ ವೇಶ್ಯೆ ಅಮ್ರಪಾಲಿಯ ಬದುಕು ಬುದ್ಧ ನೀಡಿದ ಗೌರವದಿಂದ ಒಳ್ಳೆಯ ಬೋಧನೆಗಳಿಂದ ಬದಲಾಯಿತು. ಬುದ್ಧನಿಗೆ ಅತಿಥಿ ಸತ್ಕಾರ ನೀಡಿದ ಅಮ್ರಪಾಲಿಯನ್ನು ಬುದ್ಧನ ಕಾಲದ ಸಮಾಜ ಕೆಟ್ಟ ದೃಷ್ಟಿಯಲ್ಲೇ ನೋಡಿತ್ತು. ಆದರೆ ಬುದ್ಧ ಆಕೆಗೆ ದೀಕ್ಷೆ ನೀಡಿ ಸನ್ನಡತೆಯ ಮಹಿಳೆಯನ್ನಾಗಿ ಪರಿವರ್ತಿಸಿದ. ಯೇಸುಕ್ರಿಸ್ತನೂ ಕೂಡ ವೇಶ್ಯೆ ಮ್ಯಾಗ್ಡಲೀನಾಳನ್ನು ಶಿಷ್ಯೆಯನ್ನಾಗಿ ಸ್ವೀಕರಿಸಿ ಅವಳಿಗೆ ಪಾಪಪ್ರಜ್ಞೆಯಿಂದ ವಿಮುಕ್ತಿಕೊಟ್ಟು ಆಕೆಯ ಬದುಕನ್ನು ಉದ್ಧರಿಸಿದರು ಬದಲಾಗಿ ಹೀಗಳೆಯಲಿಲ್ಲ. ಮಾನವತಾವಾದಿ, ದೀನರ ಬಂಧು, ಸಮಾಜದ ಸಮತೋಲನಕ್ಕೆ ಕಾನೂನಿನ ಅಡಿಪಾಯ ಹಾಕಿದ ಡಾ. ಬಾಬಸಾಹೇಬ್ ಅಂಬೇಡ್ಕರ್ ಅವರು ಕೂಡ ವೇಶ್ಯೆಯರನ್ನು ಸಂಘಟಿಸಿ ಅವರನ್ನು ಸಮಾಜದ ಮುಖ್ಯವಾಹಿನಿಗೆ ತಂದು ಉತ್ತಮ ಜೀವನ ನಡೆಸುವಂತೆ ಕಾನೂನಾತ್ಮಕ ಬೆಂಬಲವನ್ನು ನೀಡುತ್ತಾರೆ.

ಆರೋಗ್ಯಪೂರ್ಣ ಲೈಂಗಿಕ ಸುಖವನ್ನು ಗೌರವಯುತ ರೀತಿಯಲ್ಲಿ ಅನುಭವಿಸುವುದು ಪ್ರಕೃತಿಯ ಒಂದು ಹಕ್ಕು ಮತ್ತು ಸ್ವಾತಂತ್ರ್ಯ. ಇದನ್ನು ವೃತ್ತಿಯಾಗಿಪಡೆದ ವೇಶ್ಯೆಯರನ್ನು ಕೀಳಾಗಿ ಕಾಣುವುದರ ಬದಲು ಅವರ ಏಳಿಗೆಗೆ ಸೂಕ್ತವಾದ ವಾತಾವರಣವನ್ನು ಸೃಷ್ಟಿಸಿ ಅವರನ್ನು ಉದ್ಧಾರ ಮಾಡಬೇಕಾದ ಕರ್ತವ್ಯ ಮತ್ತು ಮನುಷ್ಯತ್ವ ಧರ್ಮ ಈ ಸಮಾಜಕ್ಕೆ ಮನವರಿಕೆಯಾಗಬೇಕಿದೆ.

ಗೌರವ ಸ್ಥಾನದಲ್ಲಿ ಗುರುತಿಸಿಕೊಂಡವರು ಸಹ ತಮ್ಮ ಮೋಹಗಳಿಗಾಗಿ ತಪ್ಪು ದಾರಿ ಹಿಡಿದಿರುವುದು ಬೆಳಕಿಗೆ ಆಗಲಿಂದಲೂ ಬರುತ್ತಿದೆ ಈಗಲೂ ಬಂದಿದೆ. ಇಂತಹವರಿಗೇ ಗೌರವ ನೀಡುವ ನಾವು ವೇಶ್ಯೆ ವೃತ್ತಿಯಿಂದ ಹೊರಬಂದು ಸಮಾಜದಲ್ಲಿ ನಾನು ನೈತಿಕ ಬದುಕನ್ನು ನಡೆಸಲು ಇಚ್ಛಿಸುತ್ತೇನೆ ಎನ್ನುವವರಿಗೆ ನಾವೇಕೆ ಗೌರವ ನೀಡಬಾರದು?

ಹೈನುಗಾರಿಕೆ ತರಬೇತಿಯಲ್ಲಿ ತಂದ ಬದಲಾವಣೆ

ನಮ್ಮ ರಾಜ್ಯದಲ್ಲಿ ಅಂದಾಜಿನ ಪ್ರಕಾರ ಸುಮಾರು 3 ಕೋಟಿ 7 ಲಕ್ಷದ 500 ಹಸುಗಳಿದ್ದು, ಪ್ರತಿ ವರ್ಷ 450 ಕೋಟಿ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ಭಾರತ ಸ್ವತಂತ್ರ್ಯವಾದಾಗ ಸುಮಾರು 70 ಕೋಟಿ ಗೋವುಗಳಿದ್ದವು. ದೇಶದ ಒಟ್ಟಾರೆ ಹೈನು ಉತ್ಪಾದನೆಯ ಮೌಲ್ಯ ವರ್ಷಕ್ಕೆ ಸುಮಾರು 2 ಲಕ್ಷ ಕೋಟಿ ರುಪಾಯಿಗಳು.

ಅಭಿವ್ಯಕ್ತಿ

ಪ್ರೀತಿ.ಟಿ.ಎಸ್

vveditoped@gmail.com

ಕೃಷಿ ಪ್ರಧಾನವಾದ ನಮ್ಮ ದೇಶದಲ್ಲಿ ಕೃಷಿ ಜತೆಗೆ ಜಾನುವಾರು ಸಾಕುವುದು ವಾಡಿಕೆ. ಕೃಷಿಯೊಂದಿಗೆ ಪಶುಪಾಲನೆ ಒಂದು ಪರಂಪರಾಗತ ಉಪಕಸುಬು. ಇವು ಒಂದನ್ನೊಂದು ಬಿಟ್ಟು ಇರಲಾರವು. ಹೈನು ಉತ್ಪನ್ನಗಳಿಗೆ ಹಸು-ಎಮ್ಮೆಗಳು, ಮಾಂಸಕ್ಕಾಗಿ ಕುರಿ-ಆಡುಗಳು, ಉಳುಮೆ-ಸಾಗಾಟಗಳಿಗೆ ಎತ್ತುಗಳು ಬೇಕು. ಕೃಷಿಯಿಂದ ದೊರಕುವ ಮೇವು ಪಶುಗಳಿಗೆ ಸಮೃದ್ಧ ಆಹಾರ. ಆದರೆ ಈ ಉದ್ಯೋಗಕ್ಕೆ ಒಂದು ವಾಣಿಜ್ಯಕ ಸ್ವರೂಪ ಸಿಗುತ್ತಿರುವುದು ತೀರ ಇತ್ತೀಚೆಗೆ ಎನ್ನಬಹುದು.

ನಮ್ಮ ರಾಜ್ಯದಲ್ಲಿ ಅಪಾರ ಸಂಖ್ಯೆಯ ರೈತರು ಹೈನುಗಾರಿಕೆ ಅವಲಂಬಿಸಿದ್ದಾರೆ. ಕೃಷಿ ಇಲ್ಲದೇ ಹೈನುಗಾರಿಕೆಯನ್ನೇ ಪ್ರಧಾನವಾಗಿಟ್ಟುಕೊಂಡು ಜೀವನ ನಿರ್ವಹಿಸುತ್ತಿದ್ದಾರೆ. ಇನ್ನು ಹೈನುಗಾರಿಕೆಯನ್ನು ಮೇಲ್ನೋಟಕ್ಕೆ ಸರಳ, ಆಕರ್ಷಣೀಯ ಎಂದು ಭಾವಿಸಿ ಈ ಕ್ಷೇತ್ರಕ್ಕೆ ಬಂದು ನಷ್ಟಕ್ಕೀಡಾದವರು ಅನೇಕ. ಇದಕ್ಕೆ ಪ್ರಮುಖ ಕಾರಣ ಹೈನುಗಾರಿಕೆ ಬಗ್ಗೆ ಅವರಿಗೆ ಸೂಕ್ತವಾದ ಮಾಹಿತಿ, ತರಬೇತಿ ಇಲ್ಲದಿರುವುದು ಹಾಗೂ ಹಸು ಸಾಕಲು ತರಬೇತಿ ಬೇಕೇ ಎಂದು ಭಾವಿಸುವುದಾಗಿದೆ. ಈ ನಿಟ್ಟಿನಲ್ಲಿ ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮವು ಹಲವು ಸಂಸ್ಥೆಗಳ ಸಹಕಾರದೊಂದಿಗೆ ಹೈನುಗಾರಿಕೆಯನ್ನು ವ್ಯವಸ್ಥಿತವಾಗಿ ಸಾರ್ವಜನಿಕರಿಗೆ ಮುಟ್ಟಿಸುವಲ್ಲಿ ಸಾಕಷ್ಟು ತರಬೇತಿಗಳನ್ನು ನೀಡುತ್ತ ಬಂದಿದೆ. ಕೃಷಿ ನಂಬಿ ಕೈ ಸುಟ್ಟುಕೊಂಡು ಜೀವನ ಸಾಗಿಸಲು ಹೆಣಗಾಡುತ್ತಿದ್ದ ಅದೆಷ್ಟೋ ರೈತಾಪಿ ವರ್ಗದವರು, ಮನೆಗೆಲಸವನ್ನಷ್ಟೇ ನಿಭಾಯಿಸಿಕೊಂಡು ಹೋಗುತ್ತಿದ್ದ ಹೆಣ್ಣುಮಕ್ಕಳು, ವಿದ್ಯಾಭ್ಯಾಸ ಮುಗಿಸಿಕೊಂಡು ಬಂದ ಯುವಜನರು ಈ ತರಬೇತಿ ಪಡೆದುಕೊಳ್ಳುವ ಮೂಲಕ ಇತರರಿಗೆ ಮಾದರಿಯಾಗಿ ಜೀವನ ನಡೆಸುತ್ತಿರುವುದು ಶ್ಲಾಘನೀಯ.

ಇದಕ್ಕೆ ಒಂದು ನಿದರ್ಶನವೆಂದರೆ, ಹಾಸನ ಜಿಲ್ಲೆಯ ಪ್ರಿಯದರ್ಶಿನಿ ಸಂಸ್ಥೆ ಅಭಿವೃದ್ಧಿ ಮತ್ತು ಗ್ರಾಮೀಣ ಸೊಸೈಟಿ (PTBST)ಯು ಕೃಷಿಕರಿಗೆ ಹೈನುಗಾರಿಕೆಯಲ್ಲಿ ತರಬೇತಿ ನೀಡುವ ನಿಟ್ಟಿನಲ್ಲಿ 2020ರಲ್ಲಿ ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದಿಂದ (ಕೆ.ಎಸ್.ಡಿ.ಸಿ) ಮಾನ್ಯತೆ ಪಡೆಯಿತು. ಸಾಮಾಜಿಕ ಕ್ಷೇತ್ರದಲ್ಲಿ ಸುಮಾರು ಎರಡು ದಶಕಗಳ ಅನುಭವ ಹೊಂದಿದ್ದು, ಗ್ರಾಮೀಣಾಭಿವೃದ್ಧಿ, ಮಹಿಳಾ ಸಬಲೀಕರಣ ಮತ್ತು ಕೌಶಲ್ಯಾಭಿವೃದ್ಧಿಯಲ್ಲಿ ವಿವಿಧ ಸರಕಾರಿ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ಬೆಂಬಲಿಸುತ್ತಾ ಬಂದಿದೆ. ಕೃಷಿಯನ್ನೇ ನಂಬಿ ಬದುಕು ಸಾಗಿಸುತ್ತಿರುವ ರೈತರಿಗೆ ಹೈನುಗಾರಿಕೆ ತರಬೇತಿ ನೀಡಿ ಹೊಸ ದಿಕ್ಕನ್ನು ತೋರುವ ಪ್ರಯತ್ನವನ್ನು ಈ ಸಂಸ್ಥೆಯು ಮಾಡುತ್ತ ಬಂದಿದೆ.

ಅತಿ ಹೆಚ್ಚು ಜಮೀನು ಹೊಂದಿರುವ ರೈತರು ತಮ್ಮ ಜೀವನದಲ್ಲಿ ಹೇಗೋ ಮುಂದುವರಿದು ಬಿಡುತ್ತಾರೆ. ಆದರೆ ಕಡಿಮೆ ಜಮೀನು ಹೊಂದಿರುವ ರೈತರು ಅಥವಾ ಕೃಷಿ ಬಿಟ್ಟ ರೈತರಿಗೆ ಹಾಲಿನಿಂದ ಬರುವ ಆದಾಯವೇ ವರಮಾನವಿದ್ದಂತೆ. ಕೃಷಿಯನ್ನೇ ನಂಬಿ ಬದುಕು ಸಾಗಿಸುತ್ತಿದ್ದ ರೈತರಿಗೆ ಹೈನುಗಾರಿಕೆ ತರಬೇತಿ ನೀಡಿ ಅದರ ಮೂಲಕ ತಮ್ಮ ಬದುಕನ್ನು ಕಟ್ಟಿಕೊಳ್ಳುವ ಮಾರ್ಗವನ್ನು ಪ್ರಿಯದರ್ಶಿನಿ ಸಂಸ್ಥೆಯು ಪ್ರಯತ್ನಿಸಿತು. ಹೈನು ಕೃಷಿಕ ತರಬೇತಿ ಪಡೆಯಲು ಮೊದಮೊದಲು 30 ರೈತರು ಮುಂದಾಗಿದ್ದು, ಅದರಡಿ 29 ರೈತರು ತರಬೇತಿಯಲ್ಲಿ ಉತ್ತೀರ್ಣರಾಗಿದ್ದಾರೆ. ತರಬೇತಿ ಪಡೆದುಕೊಂಡ ರೈತರು ಹಸು ಖರೀದಿಸಲು ಇಚ್ಛಿಸಿ, ಸಹಾಯದ ನಿರೀಕ್ಷೆಯನ್ನು ಸಂಸ್ಥೆಗೆ ವ್ಯಕ್ತಪಡಿಸಿದರು. ಹೀಗಾಗಿ ಸೊಸೈಟಿಯು ಬ್ಯಾಂಕ್, ಸಂಬಂಧಪಟ್ಟ ಇಲಾಖೆಗಳು, ಇತರೆ ಹಣಕಾಸು ಸಂಸ್ಥೆಗಳಲ್ಲಿ ತರಬೇತಿ ಪಡೆದವರಿಗೆ ಆರ್ಥಿಕ ನೆರವು ಕೊಡಿಸಲು ಮುಂದಾಯಿತು. ಆದರೆ ಪ್ರಯತ್ನ ಫಲಿಸಲಿಲ್ಲ.

ತದನಂತರ ಸಂಸ್ಥೆಯ ಸಿಬ್ಬಂದಿಗಳು ಹಸು ಖರೀದಿಸಲು ಮುಂದಾದ ರೈತರ ಮನೆಗೆ ನೇರವಾಗಿ ಭೇಟಿ ನೀಡಿ, ಸ್ವಂತ ಹಣವನ್ನೇ ಹೂಡಿಕೆ ಮಾಡಲು ಪ್ರೋತ್ಸಾಹಿಸಿದರು. ಮೊದಲು 5 ರೈತರು ಹಸುವನ್ನು ಖರೀದಿಸಿ ಹೈನುಗಾರಿಕೆಯಲ್ಲಿ ಯಶಸ್ಸನ್ನು ಕಂಡರು. ಈ ಐವರಿಂದ ಇದೀಗ ಗ್ರಾಮದಲ್ಲಿ 21 ರೈತರು ಹಸು ಕೊಂಡುಕೊಳ್ಳಲು ಮುಂದಾಗಿರುವುದು ಶ್ಲಾಘನೀಯ. ಹೈನುಗಾರಿಕೆ ಕಷ್ಟ ಎಂದು ಹೇಳುತ್ತಿದ್ದವರಿಗೆ, ಅದರಲ್ಲಿ ಲಾಭವಿದೆ ಎಂದು ಶ್ರೀ ಜಬ್ಬಾರ್ ಶರೀಫ್ ಅವರ ನೇತೃತ್ವದಲ್ಲಿ ಪ್ರಿಯದರ್ಶಿನಿ ಸಂಸ್ಥೆಯು ತಾಲೂಕಿನ ರೈತರಿಗೆ ತಿಳಿಸಿಕೊಟ್ಟಿದೆ.

ಹೈನುಗಾರಿಕೆಯ ಉಗಮ ಹೇಗಾಯಿತು?

ಭಾರತದಲ್ಲಿ ಹೈನುಗಾರಿಕೆ: ಅನಾದಿಕಾಲದಲ್ಲಿ ಹಾಲು ಮಾರುವುದು ಅಥವಾ ಕೊಂಡು ತರುವುದು ಮುಜುಗರದ ಸಂಗತಿಯಾಗಿತ್ತು. ಕ್ರಮೇಣ ಕೃಷಿ ವ್ಯಾಪಾರದ ದೃಷ್ಟಿಕೋನ ಪಡೆದಂತೆಲ್ಲ ಮನೆ ಬಳಕೆಯ ನಂತರ ಮಿಕ್ಕಿದ್ದ ಹಾಲನ್ನು ಮಾರಾಟ ಮಾಡುವುದು ರೂಢಿಗೆ ಬಂತು. 80ರ ದಶಕದಲ್ಲಿ ಆರಂಭವಾದ ಕ್ಷೀರ ಕ್ರಾಂತಿ ಹೈನುಗಾರಿಕೆಗೆ ಒಂದು ವ್ಯವಸ್ಥಿತ ರೂಪ ನೀಡಲು ಶಕ್ತವಾಯಿತು. ರಾಜ್ಯದ ಮೂಲೆಮೂಲೆಗಳಲ್ಲಿ ಆರಂಭವಾದ ಹಾಲು ಉತ್ಪಾದಕರ ಸಹಕಾರಿ ಸಂಘಗಳು, ಹೈನೋದ್ಯಮ ಮತ್ತು ಸಹಕಾರಿ ಆಂದೋಲನಗಳ ಯಶಸ್ಸಿಗೆ ಹೊಸ ಭಾಷ್ಯ ಬರೆದವು. ತತ್ಪರಿಣಾಮವಾಗಿ ಹೈನುಗಾರಿಕೆ ಕೃಷಿ ಮತ್ತು ಗ್ರಾಮೀಣ ಬದುಕಿಗೆ ಆಸರೆಯಾಗಿ ಬೆಳೆಯುತ್ತಿದೆ. ಗ್ರಾಮೀಣ ಅರ್ಥವ್ಯವಸ್ಥೆಯ ಆಧಾರ ಸ್ತಂಭವಾಗಿದೆ.

ಜಾಗತಿಕ ಕ್ಷೀರ ಉತ್ಪಾದನೆಯಲ್ಲಿ 2000ನೇ ಇಸವಿಯಿಂದ ಸತತವಾಗಿ ಭಾರತ ಮೊದಲ ಸ್ಥಾನದಲ್ಲಿದೆ. ಸದ್ಯದ ಉತ್ಪಾದನೆ ವರ್ಷಕ್ಕೆ 12,500 ಕೋಟಿ ಲೀಟರ್‌ಗಳು. ದೇಶದಲ್ಲಿ ಸುಮಾರು 1 ಕೋಟಿ 30 ಲಕ್ಷ ಕುಟುಂಬಗಳು ಹೈನುಗಾರಿಕೆಯಲ್ಲಿ ತೊಡಗಿವೆ. ಮುಂದಿನ 10 ವರ್ಷಗಳಲ್ಲಿ ದೇಶದ ಹಾಲಿನ ಬೇಡಿಕೆ ದ್ವಿಗುಣವಾಗಲಿದೆ. ದೇಶದ ಜಿ.ಡಿ.ಪಿ.ಯಲ್ಲಿ ಒಟ್ಟಾರೆ ಕೃಷಿಯ ಪಾಲು ಶೇ. 12.36ರಷ್ಟು. ಪಶುಪಾಲನೆ ಪಾಲು ಜಿ.ಡಿ.ಪಿ.ಯ ಶೇ. 4.9ರಷ್ಟು. ಕೃಷಿಯ ವಾರ್ಷಿಕ ಬೆಳವಣಿಗೆಯ ದರ ಶೇ. 3ರಷ್ಟಿದ್ದರೆ, ಪಶುಪಾಲನೆಯದು ಶೇ. 6ರಷ್ಟು. ಇನ್ನೂ ಹಾಲು ಉತ್ಪಾದನೆ ಶೇ. 5ರಷ್ಟರ ದರದಲ್ಲಿ ಬೆಳವಣಿಗೆ ಕಾಣುತ್ತಿದೆ. ಅಲ್ಲದೇ ದೇಶದಲ್ಲಿ ಸುಮಾರು 1.50 ಕೋಟಿ ಚಕ್ಕಡಿಗಳಿವೆ. ವರ್ಷಕ್ಕೆ ಸುಮಾರು 73 ಟನ್ ಸಗಣಿ ಉತ್ಪಾದನೆಯಾಗುತ್ತಿದ್ದು, ಜೈವಿಕ ಅನಿಲ, ಉರುವಲು ಮತ್ತು ಗೊಬ್ಬರಗಳಿಗೆ ಬಳಕೆಯಾಗುತ್ತಿದೆ. ಇದಲ್ಲದೆ ಗೋಮೂತ್ರದ ಅರ್ಕ ಹಲವಾರು ರೋಗಗಳಿಗೆ ಔಷಧಗಳಾಗಿ ಬಳಕೆಯಾಗಬಲ್ಲದು.

ಕರ್ನಾಟಕದಲ್ಲಿ ಹೈನುಗಾರಿಕೆ: ನಮ್ಮ ರಾಜ್ಯದಲ್ಲಿ ಒಂದು ಅಂದಾಜಿನ ಪ್ರಕಾರ ಸುಮಾರು 3 ಕೋಟಿ 7 ಲಕ್ಷದ 500 ಹಸುಗಳಿದ್ದು, ಪ್ರತಿ ವರ್ಷ 450 ಕೋಟಿ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ಭಾರತ ಸ್ವತಂತ್ರ್ಯವಾದಾಗ ಸುಮಾರು 70 ಕೋಟಿ ಗೋವುಗಳಿದ್ದವು. ಅಂದರೆ ಪ್ರಪಂಚದ ಮೂರನೇ ಒಂದು ಭಾಗ ನಮ್ಮಲ್ಲಿತ್ತು. ಈಗ ಸುಮಾರು 25 ಕೋಟಿ ಜಾನುವಾರುಗಳಿವೆ. ದೇಶದ ಒಟ್ಟಾರೆ ಹೈನು ಉತ್ಪಾದನೆಯ ಮೌಲ್ಯ ವರ್ಷಕ್ಕೆ ಸುಮಾರು 2 ಲಕ್ಷ ಕೋಟಿ ರುಪಾಯಿಗಳು. ಒಟ್ಟಾರೆ ಉತ್ಪಾದನೆಯಾಗುವ ಹಾಲಿನಲ್ಲಿ ಶೇ. 55 ಎಮ್ಮೆ, ಶೇ.43ರಷ್ಟು ವಿದೇಶಿ ಮಿಶ್ರ ಮತ್ತು ದೇಸಿ ತಳಿಯ ಹಸುಗಳಿಂದ, ಶೇ. 2ರಷ್ಟು ಭಾಗ ಆಡು, ಕುರಿ, ಒಂಟೆಗಳಿಂದ ಬರುತ್ತದೆ. ಒಟ್ಟು ಉತ್ಪಾದನೆಯ ಶೇ. 70ರಷ್ಟು ಭಾಗ ಹಾಲಿನ ರೂಪದಲ್ಲಿ ಮತ್ತು ಉಳಿದ ಶೇ. 30ರಷ್ಟು ಭಾಗ ಹಾಲು ಪುಡಿ, ಮೊಸರು, ಮಜ್ಜಿಗೆ, ಬೆಣ್ಣೆ, ಕೋವ, ತುಪ್ಪ, ಶ್ರೀಖಂಡ, ಲಸ್ಸಿ, ತುಪ್ಪ ಮುಂತಾದ ರೂಪಗಳಲ್ಲಿ ಖರ್ಚಾಗುತ್ತದೆ. ಅದಲ್ಲದೇ ಪಶುಪಾಲನೆಯ ಇನ್ನೊಂದು ಮಹತ್ವದ ಅಂಶ ಕೃಷಿಗಾಗಿ ಎತ್ತುಗಳ ಬಳಕೆ. ಟ್ರ್ಯಾಕ್ಟರ್‌ಗಳು, ಟಿಲ್ಲರುಗಳು, ಬಂದರು, ಎತ್ತುಗಳ ಬಳಕೆ ಸರ್ವೇಸಾಮಾನ್ಯ.

ರಾಜ್ಯದ ಹೈನೋದ್ಯಮಕ್ಕೆ ಕೆ.ಎಂ.ಎಫ್. ಬೆನ್ನೆಲುಬು:

ಹೈನುಗಾರಿಕೆಯ ಶೀಘ್ರ ಮತ್ತು ನಿರಂತರ ಆದಾಯ ಒಂದು ಪ್ರಮುಖ ಆಕರ್ಷಣೆ. ಸ್ಥಿರ ದರವಿರುವ ಏಕೈಕ ಕೃಷಿ ಉತ್ಪನ್ನ ಹಾಲು ಎನ್ನಬಹುದು. ನಮ್ಮ ರಾಜ್ಯದ ಹೈನೋದ್ಯಮಕ್ಕೆ 'ಕೆ.ಎಂ.ಎಫ್ ವ್ಯವಸ್ಥೆ' ಬೆನ್ನೆಲುಬು ಎನ್ನುವುದರಲ್ಲಿ ಸಂಶಯವೇ ಇಲ್ಲ. ಅದಾಗ್ಯೂ ನಿರಂತರವಾಗಿ ಏರುತ್ತಿರುವ ಪಶು ಆಹಾರದ ಬೆಲೆ ಹಾಗೂ ನಿರ್ವಹಣಾ ವೆಚ್ಚಗಳಿಂದ ಡೈರಿಗೆ ಹಾಲು ಹಾಕುವುದು ಪಶುಪಾಲಕರಿಗೆ ಲಾಭ ತರುತ್ತಿಲ್ಲ. ಹಾಲು ಉತ್ಪಾದನೆಯಲ್ಲಿ ಜಗತ್ತಿನಲ್ಲಿ ಪ್ರಥಮ ಸ್ಥಾನದಲ್ಲಿದ್ದರೂ ನಮ್ಮ ಉತ್ಪಾದಕತೆ ತೀರ ಕಡಿಮೆ. ಪ್ರತಿ ಹಸುವಿಗೆ ದಿನಕ್ಕೆ ಕೇವಲ 1.1/2 ಲೀಟರ್‌ಗಳು. ಒಟ್ಟು ಉತ್ಪಾದನೆಯ ಶೇ. 70 ಭಾಗ ಚಿಕ್ಕ ರೈತರಿಂದಲೇ ಬರುತ್ತಿದೆ. ಉತ್ಪಾದಕ ಮತ್ತು ಗ್ರಾಹಕ ಬೆಲೆಗಳಲ್ಲಿ ಭಾರಿ ಅಂತರವಿದೆ. ಇದನ್ನು ಮನಗಂಡ ದೊಡ್ಡ ಹೈನುಗಾರರು ತಮ್ಮದೇ ಲೀಟರ್ ನೇರ ಮಾರಟ ಜಾಲ ರೂಪಿಸಿಕೊಂಡು ಯಶಸ್ವಿಯಾಗುತ್ತಿದ್ದಾರೆ.

ಇಷ್ಟು ಕಾಲ ನಿರ್ಲಕ್ಷ್ಯವಾಗುತ್ತಿದ್ದ ಸಗಣಿ, ಗಂಜಲುಗಳು, ಸಾವಯವ ಕೃಷಿಯಿಂದಾಗಿ ಹೆಚ್ಚಿನ ಬೆಲೆ ಪಡೆಯುತ್ತಿವೆ. ಜೈವಿಕ ಅನಿಲದ ಬಳಕೆ ಕೂಡ ಹೆಚ್ಚುತ್ತಿದೆ. ಈ ರೈತರು ವಿದ್ಯುತ್ ಕೈ ಕೊಟ್ಟಾಗ ನೀರಾವರಿ ಉದ್ದೇಶಕ್ಕೆ ವಿದ್ಯುತ್ ಉತ್ಪಾದಿಸುತ್ತಾರೆ. ಈ ಡೀಸೆಲ್ ಜನರೇಟರ್‌ಗೆ ಶೇ. 70ರಷ್ಟು ಬಯೋ ಗ್ಯಾಸ್ ಮತ್ತು ಶೇ. 30ರಷ್ಟು ಡಿಸೇಲ್ ಉಳಿಸುತ್ತಾರೆ. ಇನ್ನೂ ಈ ರೈತರು ಹಾಲು ಕರೆಯುವ ಯಂತ್ರ ನಡೆಸಲು ಕೆರೋಸಿನ್ ಇಂಜಿನ್ ಬಳಸುತ್ತಾರೆ. ಇಂಜಿನ್ ಚಾಲು ಆದ ನಂತರ ಪೂರ್ತಿ ಬಯೋ ಗ್ಯಾಸ್ ಬಳಸುತ್ತಾರೆ. ಸಾವಯವ ಕೃಷಿಯಲ್ಲಿ ರೈತರು ಗೊಬ್ಬರಕ್ಕೆ ಸಗಣಿಯನ್ನು ಬಹುವಾಗಿ ನೆಚ್ಚಿಕೊಂಡಿದ್ದಾರೆ.

1. ನಮ್ಮ ಮನೆಯಲ್ಲಿ ಈಗಾಗಲೇ ಒಂದು ಹಸು ಇದೆ. ಅದನ್ನ ಸಾಕೋಕೆ ನಮಗೆ ಬಹಳ ಕಷ್ಟ ಅಂತ ಅನಿಸ್ತಿತ್ತು. ತರಬೇತಿ ನಂತರ ನಮಗೆ ಈಗ ಹಸು ಸಾಕೋದು ಕಷ್ಟ ಅಲ್ಲ ಅಂತ ಮನವರಿಕೆ ಆಗಿದೆ. ಇನ್ನೂ ಎರಡು ಹಸು ಇದ್ರೂ ಸಾಕಬಹುದು ಅಂತ ಅನಿಸ್ತಿದೆ.

– ರತ್ನಮ್ಮ, ಸಿಂಗಟಗೆರೆ ಗ್ರಾಮ ಅರಸೀಕೆರೆ ತಾಲೂಕು

2. ಪ್ರಿಯದರ್ಶಿನಿ ಸಂಸ್ಥೆಯ ಶರೀಫ್ ಅವರು ನಮ್ಮ ಗ್ರಾಮಕ್ಕೆ ಭೇಟಿ ನೀಡಿ ಕೃಷಿಯೊಂದನ್ನೇ ನಂಬಿ ಬದುಕು ಸಾಗಿಸುವುದಕ್ಕಿಂತ ಅದರೊಂದಿಗೆ ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡರೆ ಆದಾಯ ಹೆಚ್ಚಿಸಬಹುದು ಎಂದು ತಿಳಿಸಿ ತರಬೇತಿ ಪಡೆಯಲು ನಮ್ಮನ್ನು ಪ್ರೋತ್ಸಾಹಿಸಿದರು. ತರಬೇತಿ ಪಡೆದ ನಂತರ ಹೈನುಗಾರಿಕೆಯ ಮಹತ್ವ ಅರಿವಾಗಿದೆ. ಇದೀಗ ಮೂರು ಹಸು ಖರೀದಿಸಬೇಕೆಂದು ತೀರ್ಮಾನಿಸಿದ್ದೇನೆ. ಪ್ರತಿಯೊಬ್ಬ ರೈತ ಈ ತರಬೇತಿಯ ಸದುಪಯೋಗ ಪಡೆಯಬೇಕು ಎಂದು ನಾನು ಇಚ್ಛಿಸುತ್ತೇನೆ.

– ಸತೀಶ, ಹೊಸೂರು ಗ್ರಾಮ, ಹಾಸನ ಜಿಲ್ಲೆ



ನಾರದ ಸಂಚಾರ

ಅಭ್ಯಾಗತ

abhyagatha@yahoo.co.in

ಬೌದ್ಧ ಅನುಯಾಯಿಗೆ ಜಾತಿಪಟ್ಟ

ಬಿಹಾರದಲ್ಲಿ ಭಾರತೀಯ ಜನತಾ ಪಕ್ಷ ಮತ್ತು ಸಂಯುಕ್ತ ಜನತಾ ದಳ ಮೈತ್ರಿ ಮಾಡಿಕೊಂಡು ಆಡಳಿತ ನಡೆಸುತ್ತಿವೆ. ಆದರೆ, ಚಕ್ರವರ್ತಿ ಅಶೋಕನ ಬಗ್ಗೆ ಭಿನ್ನಾಭಿಪ್ರಾಯ ಹೊಂದಿವೆ. ಮೂರನೇ ಶತಮಾನದ ಅಶೋಕ ಚಕ್ರವರ್ತಿಯು ಒಬಿಸಿ ಸ್ಥಾನಮಾನ ಹೊಂದಿರುವ ಸಮುದಾಯದ ಕುಶ್ವಾಹ ಜಾತಿಗೆ ಸೇರಿದವನು ಎಂದು ಎರಡು ಪಕ್ಷಗಳು ಒಪ್ಪಿಕೊಂಡರು ಸಹ ಅವರ ಜಯಂತಿಯನ್ನು ಪ್ರತ್ಯೇಕವಾಗಿ ಆಚರಿಸಲು ಮುಂದಾಗಿವೆ. ಬಿಜೆಪಿಯು ಅಶೋಕನ ಸ್ಮರಣಾರ್ಥ ಕಾರ್ಯಕ್ರಮ ಏರ್ಪಡಿಸಿ ಕೇಂದ್ರ ಸಚಿವ ಭೂಪೇಂದರ್ ಯಾದವ್ ಸೇರಿದಂತೆ ಪಕ್ಷದ ಉಳಿದ ಒಬಿಸಿ ನಾಯಕರನ್ನು ಆಹ್ವಾನಿಸಿದೆ. ಇತ್ತ ಜೆಡಿಯು ಅಶೋಕನು ಏ.14 ರಂದು ಜನಿಸಿದ್ದಾನೆ ಎಂದು ಪ್ರತಿಪಾದಿಸಿ ಒಬಿಸಿಗಳನ್ನು ಓಲೈಸಲು ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಪ್ರಮುಖ ಸಹಾಯಕ ಉಪೇಂದ್ರ ಕುಶ್ವಾಹ ಅವರ ನೇತೃತ್ವದಲ್ಲಿ ಪ್ರತ್ಯೇಕ ಕಾರ್ಯಕ್ರಮವನ್ನು ನಡೆಸುವ ಮೂಲಕ 'ಬಿಜೆಪಿ ಹಿಂದುಳಿದ ಜನಾಂಗದವರನ್ನು ಓಲೈಸಲು ಪ್ರಯತ್ನಿಸುತ್ತಿದೆ' ಎಂದು ಟೀಕಿಸಿದೆ. ಒಟ್ಟಿನಲ್ಲಿ ಬೌದ್ಧ ಧರ್ಮದ ಅನುಯಾಯಿಯಾಗಿದ್ದ ಅಶೋಕ ಚಕ್ರವರ್ತಿಯನ್ನು ರಾಜಕೀಯ ಪಕ್ಷಗಳು ತಮ್ಮ ರಾಜಕಾರಣದ ಲಾಭಕ್ಕಾಗಿ ಒಂದು ಜಾತಿಗೆ ಸೀಮಿತ ಮಾಡುವುದರ ಜತೆಗೆ ರಾಜಮನೆತನದ ಜಾತಿ ವಿಷಯವನ್ನು ಕೆದಕುವ ಮೂಲಕ ತಮ್ಮ ಬೇಳೆ ಬೆಯಿಸಿಕೊಳ್ಳುತ್ತಿವೆ ಎಂದು ಮರುಗಿದನಂತೆ ಬೌದ್ಧ ಸನ್ಯಾಸಿ.

ಊಟದ ವಿರಾಮಕ್ಕೆ ಕತ್ತರಿ

ಉತ್ತರ ಪ್ರದೇಶದ ಸರಕಾರಿ ನೌಕರರು ಊಟದ ವಿರಾಮದ ನೆಪದಲ್ಲಿ ಕೆಲಸ ಮಾಡದೆ ಹೆಚ್ಚು ಸಮಯ ವ್ಯರ್ಥ ಮಾಡುತ್ತಿದ್ದಾರೆ ಎಂದು ಅಪಖ್ಯಾತಿ ಗಳಿಸಿದ್ದಾರೆ. ಅವರು ಊಟವನ್ನು ಮಾಡಲು ಮನೆಗೆ ಹೋಗಿ ಕೆಲಹೊತ್ತು ನಿದ್ದೆ ಮಾಡಿ ಬರುತ್ತಾರಂತೆ. ಇಂಥವರ ಕುರಿತು ದೂರು ಪಡೆದಿರುವ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಶಿಸ್ತುಕ್ರಮವನ್ನು ಜಾರಿಗೊಳಿಸಿದ್ದಾರೆ. ಊಟದ ವಿರಾಮವು 30 ನಿಮಿಷಗಳಿಗಿಂತ ಹೆಚ್ಚಿರಬಾರದು ಜತೆಗೆ ಕ್ಷುಲ್ಲಕ ಕಾರಣಕ್ಕಾಗಿ ಯಾವುದೇ ಉದ್ಯೋಗಿ ಕೆಲಸ ಮಾಡದೆ ಸಮಯವನ್ನು ವ್ಯರ್ಥ ಮಾಡಿದರೆ ಕಠಿಣ ಶಿಕ್ಷೆಯನ್ನು ಎದುರಿಸಬೇಕಾಗುತ್ತದೆ ಎಂದು ಸಿಎಂ ಖಡಕ್ ಎಚ್ಚರಿಕೆ ನೀಡಿದ್ದಾರಂತೆ. ನಮ್ಮ ಕರ್ನಾಟಕದಲ್ಲಿ ಏಕೆ ಈ ರೀತಿಯ ಕ್ರಮಗಳು ಸಾಧ್ಯವಿಲ್ಲ ಎಂದು ರಾಜ್ಯ ಸರಕಾರಿ ನೌಕರರನ್ನು ಕೇಳಿದರೆ, ನಮ್ಮ ವಿಧಾನಸಭೆ ಮೇಲೆಯೇ 'ಸರಕಾರದ ಕೆಲಸ ದೇವರ ಕೆಲಸ' ಎಂದಿದೆಯಲ್ಲ ಮತ್ಯಾಕೆ ವಿಶೇಷ ಕ್ರಮ ಎಂದು ಹೇಳಿದರಂತೆ.

ನಾರಾಯಣ ನಾರಾಯಣ

ಪಿಎಸ್‌ಐ ಹಗರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಪ್ರಚಾರ ಸಮಿತಿಯ ಅಧ್ಯಕ್ಷ ಎಮ್.ಬಿ ಪಾಟೀಲ್ ಕುರಿತಾಗಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ್ ಹೇಳಿಕೆ ನೀಡಿದ ಬೆನ್ನಲ್ಲೇ ನಟಿ ರಮ್ಯಾ ಟ್ವೀಟ್ ಮಾಡುವ ಮೂಲಕ ರಾಜ್ಯ ಕಾಂಗ್ರೆಸ್ ನಾಯಕರ ವಿರುದ್ಧ ಕುಟುಕಿ, ನನಗೆ ಅವಕಾಶ ನೀಡಿದ್ದು ರಾಹುಲ್ ಗಾಂಧಿ, ಉಳಿದವರು ಅವಕಾಶವಾದಿಗಳು ಎಂದಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಲು ಮುಂದಾದ ಡಿಕೆಶಿ ಬೆಂಬಲಿಗರಿಗೆ ತಿರುಗಿ ಟಾಂಗ್ ನೀಡಿದ್ದಾರೆ. ಇದರಿಂದಾಗಿ ಬೂದಿ ಮುಚ್ಚಿದ ಕೆಂಡದಂತಿದ್ದ ಕೆಪಿಸಿಸಿ ಒಳಗಿನ ಬಣ ರಾಜಕೀಯದ ಕಚ್ಚಾಟ ಜಗಜ್ಜಾಹೀರಾಗಿದೆ. ಮೊದಮೊದಲು ರಾಜ್ಯ ಕಾಂಗ್ರೆಸ್ ನಾಯಕರಿಗೆ ಒಗ್ಗಟ್ಟಿನ ಮಂತ್ರ ಉಪದೇಶಿಸಲು ಬಂದಿದ್ದ ರಮ್ಯಾ ನಾಯಕರನ್ನು ಇಬ್ಭಾಗ ಮಾಡುವ ಮೂಲಕ ಅಜ್ಞಾತ ಸ್ಥಳದಲ್ಲಿ ತಣ್ಣಗಾಗಿದ್ದಾರೆ. ಇತ್ತ ಬಿಜೆಪಿಯ ಉನ್ನತ ಶಿಕ್ಷಣ ಸಚಿವ ಡಾ.ಅಶ್ವತ್ಥ ನಾರಾಯಣ ಅವರ ಹೆಸರು ಪಿಎಸ್‌ಐ ಹಗರಣದಲ್ಲಿ ಕೇಳಿ ಬಂದಿರುವ ಸುದ್ದಿಗಿಂತ ಕಾಂಗ್ರೆಸ್ ಮುಖಂಡರ ಪರಸ್ಪರ ಸಾಮಾಜಿಕ ಜಾಲತಾಣದಲ್ಲಿನ ಕೆಸರೆರಚಾಟದ ಸುದ್ದಿಯೇ ಜೋರಾಗಿದೆ ಎಂದು ಎರಡು ಪಕ್ಷದ ಬೆಂಬಲಿಗರು ಕುತೂಹಲದಿಂದ ನೋಡುತ್ತಿದ್ದಾರೆ.